ರಾಜಕೀಯ ಭಿನ್ನಮತವನ್ನು ವ್ಯಕ್ತಪಡಿಸುತ್ತಿದ್ದರು. ಅವರನ್ನು ಬೀದರಿನಿಂದ ರಾಯಚೂರಿಗೆ ವರ್ಗಾವಣೆ (1914) ಮಾಡಲಾಯಿತು. ರಾಯಚೂರಿನಲ್ಲಿದ್ದಾಗ ಅವರು 'ರಾಜಾಬಹಾದ್ದೂರ್' ಹೆಸರಲ್ಲಿ ನಿಜಾಮರನ್ನು 'ಇಂಡಿಯನ್ ಡಯರ್' ಎಂದು ಟೀಕಿಸುವ ಲೇಖನ (1920) ಪ್ರಕಟಿಸಿದರು. ಸರ್ಕಾರವು ತಾರಾನಾಥರನ್ನು ಬಂಧಿಸುವ ಸಾಧ್ಯತೆಯನ್ನು ಊಹಿಸಿದ ಅವರ ಗೆಳೆಯರು, ಅವರನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ರಾಂಪುರದ ಸಮೀಪದಲ್ಲಿದ್ದ ತುಂಗಭದ್ರಾಕ್ಕೆ (1921) ದಾಟಿಸಿದರು. ಅದುವೇ ಮುಂದಿನ ಮೂರು ದಶಕಗಳ ಕಾಲ ತಾರಾನಾಥರ ಕರ್ಮಭೂಮಿಯಾಗಿ ಮಾರ್ಪಟ್ಟಿತು. ತಾರಾನಾಥರು ಕಂಪ್ಲಿ ಭೀಮರಾವ್ ಎಂಬುವರು ಕೊಟ್ಟ ಜಮೀನಿನಲ್ಲಿ, ದಕ್ಷಿಣ ಭಾರತದ ಸಾಬರಮತಿ ಎನ್ನಬಹುದಾದ 'ಪ್ರೇಮಾಯತನ' ಆಶ್ರಮವೊಂದನ್ನು ಕಟ್ಟಿದರು. ಅದು ನಾಡಿನ ಬೇರೆಬೇರೆ ಲೇಖಕರು, ರಾಜಕೀಯ ನಾಯಕರು, ಸಂಗೀತಗಾರರು, ವೈದ್ಯರು, ಯೋಗಿಗಳು, ರೋಗಿಗಳು ಭೇಟಿಕೊಡುವ ತಾಣವಾಯಿತು; ಅನೌಪಚಾರಿಕ ವಿಶ್ವವಿದ್ಯಾಲಯವಾಗಿ ಕೆಲಸ ಮಾಡಿತು. ಮೂರು ದಶಕಗಳ ಕಾಲ ಅಲ್ಲಿ ನಡೆದ ಅಪೂರ್ವ ಪ್ರಯೋಗಗಳು ಕರ್ನಾಟಕದ ಚರಿತ್ರೆ, ಸಾಹಿತ್ಯ ಮತ್ತು ಸಂಸ್ಕೃತಿ ದೃಷ್ಟಿಯಿಂದ ಮಹತ್ವದ್ದಾಗಿವೆ.

## ರಾಜಕೀಯ ಚಟುವಟಿಕೆ

ರಾಜಕೀಯ ಬಂಡುಕೋರತನದ ಹಿನ್ನೆಲೆಯಲ್ಲಿ ಹುಟ್ಟಿದ ಪ್ರೇಮಾಯತನ, ಸಹಜವಾಗಿಯೇ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು. ಗಾಂಧಿಯವರು ಸಾಬರಮತಿಯಲ್ಲಿ ಮಾಡಿದ ಧಾರ್ಮಿಕ, ಆರ್ಥಿಕ, ಆಧ್ಯಾತ್ಮಿಕ ಪ್ರಯೋಗಗಳ ಹಿಂದೆಯೂ, ಬ್ರಿಟಿಶರ ವಿರುದ್ಧದ ಬಂಡುಕೋರತನದ ಅಂಶವಿತ್ತಷ್ಟೆ. ತಾರಾನಾಥರು ಮುಖ್ಯವಾಗಿ ಹೈದರಾಬಾದ್ ಕರ್ನಾಟಕ ವಿಮೋಚನೆ, ಕರ್ನಾಟಕ ಏಕೀಕರಣ ಹಾಗೂ ವಸಾಹತುಶಾಹಿ ವಿರೋಧಿ ಚಳವಳಿಗಳ ಜತೆ ಗುರುತಿಸಿಕೊಂಡರು. ಈ ದೃಷ್ಟಿಯಿಂದ ಧಾರವಾಡ ಜಿಲ್ಲಾ ರಾಜಕೀಯ ಪರಿಷತ್ತಿನಲ್ಲಿ ಅವರು ಮಾಡಿದ ಏಕೀಕರಣ ಕುರಿತ ಭಾಷಣವು (1923) ಮುಖ್ಯವಾಗಿದೆ. ಪ್ರೇಮಾಯತನದ ಆಸುಪಾಸಿನ ಕನ್ನಡದ ಊರುಗಳು ಹೈದರಾಬಾದ್ ಮದರಾಸು ಮುಂಬೈ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದವು. ಹೀಗಾಗಿ, ಅವರು ಏಕೀಕರಣ ಬಯಸಿದ್ದು ಸಹಜವಾಗಿತ್ತು. ಇದಕ್ಕೆ ಪೂರಕವಾಗಿ ನಾಡಿನ ಎಲ್ಲ ಪ್ರಾಂತ್ಯಗಳಲ್ಲೂ ಅವರ ಶಿಷ್ಯರಿದ್ದರು. ರಾಷ್ಟ್ರೀಯ ವಿಮೋಚನ ಚಳವಳಿಯ ಭಾಗವಾಗಿ ಅವರು ಗಾಂಧಿಯವರ ಅನುಯಾಯಿಯಾಗಿದ್ದರು. 'ಶಿಕ್ಷಿತರು ಹಳ್ಳಿಗೆ ಮರಳಬೇಕು' ಎಂಬ ಗಾಂಧಿಯವರ ಕರೆಯನ್ನು ತುಂಗಭದ್ರಾದ ಆಶ್ರಮವು ಪರೋಕ್ಷವಾಗಿ ಈಡೇರಿಸಿತು. ತಾರಾನಾಥರು ಸದಾ ಖಾದಿ ಧರಿಸುತ್ತಿದ್ದರು. ತಮ್ಮ 'ಕಬೀರ' ನಾಟಕವನ್ನು ಗಾಂಧಿಯವರ ಸಮಕ್ಷಮದಲ್ಲಿ (ಬೆಂಗಳೂರು: 1927) ಪ್ರದರ್ಶಿಸಿ, ಸಂಗ್ರಹವಾದ ಹಣವನ್ನು ಖಾದಿಪ್ರಚಾರ ನಿಧಿಗೆ ನೀಡಿದರು. 'ಪ್ರೇಮಾಯತನ'ದಲ್ಲಿ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಅಧಿವೇಶನ (1937) ನಡೆಯಿತು. ಸ್ವಾತಂತ್ರ್ಯ ಮತ್ತು ಏಕೀಕರಣ ಎರಡೂ ಚಳವಳಿಗಳಲ್ಲಿ ಕೆಲಸ ಮಾಡಿದ ಕೆಲವೇ ಕನ್ನಡಿಗರಲ್ಲಿ ತಾರಾನಾಥರೂ ಒಬ್ಬರು.

ತಾರಾನಾಥರು ರಾಜಕೀಯವಾಗಿ ನಿಜಾಮರ ಆಳಿಕೆಗೆ ವಿರುದ್ಧವಾಗಿದ್ದರೂ, ಹಿಂದು–ಮುಸ್ಲಿಮರು ಸಾಮರಸ್ಯದಲ್ಲಿ ಬದುಕುವುದರಿಂದ ಮಾತ್ರ ನಾಡಿನ ಏಳಿಗೆ ಸಾಧ್ಯವೆಂದು ನಂಬಿದ್ದವರು. ಇದಕ್ಕೆ ಬೇಕಾಗಿ ಅವರ ಶಿಷ್ಯರು, ನಾನಾ ಜಾತಿ ಮತ್ತು ಧರ್ಮಗಳಿಂದ ಬಂದವರಾಗಿದ್ದರು. ಅವರು ರಾಯಚೂರಿನಲ್ಲಿ ಸ್ಥಾಪಿಸಿದ 'ಹಮ್‌ದರ್ದ್' ಶಾಲೆಯಲ್ಲೂ (1920) ಎಲ್ಲ ಧರ್ಮದ ಮಕ್ಕಳು ಹಾಗೂ ಶಿಕ್ಷಕರು ಇರುವಂತೆ ನೋಡಿಕೊಂಡಿದ್ದರು. 'ಪ್ರೇಮಾಯತನ'ದ ಕಾರ್ಯಕ್ರಮಗಳಲ್ಲೂ ಈ ಧಾರ್ಮಿಕ ಸಾಮಾಜಿಕ ಪ್ರಾತಿನಿಧ್ಯ ಇರುವಂತೆ ಎಚ್ಚರ ವಹಿಸುತ್ತಿದ್ದರು. ಅವರು ಬೀದರಿನಲ್ಲಿದ್ದಾಗ